ಶ್ರೀ ಎಂ. ಚಂದ್ರಶೇಖರಿರ್:—ಉತ್ತರದಲ್ಲಿ ವಾರ್ಷಿಕ ಬಡ್ತಿಗಳನ್ನು ಹೊಂದಲು ಯಾವುದೇ ಕರ ಡಚ್ಚು ಪರೀಕ್ಷೆಕರ ವರ್ಗಗಳಿಗೆ ಸೀನಿಯರ್ ದರ್ಜೆ ಪರೀಕ್ಷೆಯನ್ನು ಪಾಸು ಮಾಡಬೇಕಾದ್ದಿಲ್ಲ, ಆದರೆ ಹುದ್ದೆ ಗಳಿಗೆ ಮುಂಬಡ್ತಿ ಬೇಕಾಗಿದ್ದರೆ ಪಾಸು ಮಾಡಬೇಕು ಎಂದು ಹೇಳಿದ್ದೀರಿ. ಈ ನಿರ್ದೇಶನವನ್ನು ಅಧಿ ಕಾರಿಗಳಿಗೆ ಅಥವಾ ಕಾರ್ಮಿಕರಿಗೆ ಇಲಾಖೆಯ ಪರವಾಗಿ ಏನಾದರೂ ತಿಳಿಸಿದ್ದೀರಾ? ಮತ್ತು ಇಲಾಖೆಯ ಮುಖಾಂತರ ಪರೀಕ್ಷೆಗಳನ್ನು ಮಾಡುತ್ತೇವೆ ಅಥವಾ ಹೊರಗಡೆ ಮಾಡುತ್ತೇವೆ ಎಂದು ಏನಾದರೂ ಸೂಚನೆ ನೀಡಿದ್ದೀರಾ?

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ:—ಮುಂಬಡ್ತಿ ಹೊಂದಲು ಈ ರೀತಿ ಆಗಬೇಕು ಎಂದು ರೂಲ್ಸ್ ಇರುವುದು ಎಲ್ಲರಿಗೂ ಗೊತ್ತಿದೆ.

ಶ್ರೀ ಎಂ. ಚಂದ್ರಶೇಖರಿರ್:—ಕೇಂದ್ರೀಯ ಮುದ್ರಣಾಲಯದಲ್ಲಿ ಪರೀಕ್ಷೆಗಳನ್ನು ಆ ಇಲಾಖೆ ಯವರೇ ಮಾಡುತ್ತಾರೋ ಅಥವಾ ಹೊರಗಡೆ ಅಂದರೆ ಬೇರೆ ಇಲಾಖೆಯವರು ಮಾಡುತ್ತಾರೋ ಎನ್ನು ವುದನ್ನು ಅವರಿಗೆ ತಿಳುವಳಿಕೆ ಕೊಟ್ಟಿದ್ದೀರಾ? ಸಾಮಾನ್ಯವಾಗಿ ಪ್ರಮೋಷನ್‌ಗೆ ಆಯಾ ಇಲಾಖೆಯವರೇ ಡಿಪಾರ್ಟ್‌ಮೆಂಟಲ್ ಎಗ್ಸಾಮಿನೇಷನ್ ಮಾಡುತ್ತಾರೆ. ಆದರೆ ಇಲ್ಲಿ ಅವರೇ ಮಾಡುತ್ತಾರೋ ಅಥವ ಹೊರಗಡೆ ಮಾಡುತ್ತಾರೋ ಎನ್ನುವುದನ್ನು ಅವರಿಗೆ ತಿಳಿಸಿದ್ದೀರಾ?

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ:—ಹೌದು ಈ ಪರೀಕ್ಷೆಗಳನ್ನು ಕರ್ನಾಟಕ ಸೆಕೆಂಡರಿ ಎಜುಕೇಷನ್ ಎಗ್ಸಾಮಿನೇಷನ್ ಬೋರ್ಡ್ ಮಾಡುತ್ತಾ ಇದೆ ಎನ್ನುವುದು ಇಲಾಖೆಯವರಿಗೆ ಗೊತ್ತಿದೆ.

ಶ್ರೀ ಎಂ. ಚಂದ್ರಶೇಖರಿರ್.—ಸ್ವಾಮಿ, ಒಂದನೆಯದಾಗಿ ಇದರ ಬಗ್ಗೆ ದೂರು ಬಂದಿದೆ. ಏನೆಂದರೆ, ಈ ಒಂದು ತಿಳಿವಳಿಕೆಯನ್ನು ಸರಿಯಾಗಿ ಅಧಿಕಾರಿಗಳಿಗೆ ತಿಳಿಸಿಲ್ಲ ಎಂದು. ಎರಡನೆಯದಾಗಿ ೨೦ ರೂಪಾಯಿ ಶುಲ್ಕವನ್ನು ವಸೂಲು ಮಾಡುತ್ತಿದ್ದಾರೆ. ಬೇರೆ ಪರೀಕ್ಷೆಗಳಿಗೆ ಸರ್ಕಾರಿ ಅಧಿಕಾರಿಗಳಿಂದ ಶುಲ್ಕ ವಸೂಲಾಗುವುದಿಲ್ಲ. ಆದರೆ ಇವರಿಂದ ೨೦ ರೂಪಾಯಿ ಶುಲ್ಕವನ್ನು ಏಕೆ ವಸೂಲು ಮಾಡು ತ್ತಿದ್ದಾರೆ?

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ:—ಈ ಶುಲ್ಕವನ್ನು ಬೋರ್ಡ್‌ನವರು ವಸೂಲಿ ಮಾಡುತ್ತಿದ್ದಾರೆ. ಪರೀಕ್ಷೆಗಳಿಗೆ ಈ ಡಿಪಾರ್ಟ್‌ಮೆಂಟ್‌ನವರು ಮಾತ್ರವಲ್ಲ ಬೇರೆಯವರೂ ಕುಳಿತುಕೊಳ್ಳುವಂಥ ಅವಕಾಶ ವಿದೆ.

ಶ್ರೀ ಎಂ. ಚಂದ್ರಶೇಖರಿರ್:—ಈ ಇಲಾಖೆಯವರು ಅಲ್ಲಿ ಪರೀಕ್ಷೆಗಳಲ್ಲಿ ಕುಳಿತಾಗ ಇಲಾಖೆ ಅಧಿ ಕಾರಿಗಳಿಂದ ಶುಲ್ಕ ವಸೂಲು ಮಾಡದೇ ಇರುವಂಥ ನಿರ್ದೇಶನವಿಲ್ಲ. ಕೆಲಸ ಮಾಡುವವರಿಂದ ೨೦ ರೂಪಾಯಿ ಶುಲ್ಕ ವಸೂಲು ಮಾಡುತ್ತಾರೆ. ಕೊನೆಯದಾಗಿ, ೬ ಮಂದಿ ಪರೀಕ್ಷೆಯಲ್ಲಿ ಉತ್ತೀರ್ಣ ರಾಗದೇ ಇರುವುದರಿಂದಾಗಿ ಅವರಿಗೆ ಮುಂಬಡ್ತಿ ಕೊಟ್ಟಿಲ್ಲ ಎಂದು ಹೇಳಿದ್ದೀರಿ ಅವರಿಗೆ ವಯಸ್ಸಿನಲ್ಲಿ ೪೫ ವರ್ಷ ಮೀರಿದೆ. ರೂಲ್ಸ್ ಪ್ರಕಾರ ಮುಂಬಡ್ತಿಗೋಸ್ಕರ ಇವರು ಯಾವುದೇ ಪರೀಕ್ಷೆಯಲ್ಲಿ ಕುಳಿತು ಪಾಸ್ ಮಾಡಬೇಕಾಗಿದ್ದಿಲ್ಲ, ಹಾಗೆಯೇ ಇನ್‌ಕ್ರಿಮೆಂಟ್, ಪ್ರಮೋಷನ್ ಕೊಡಬೇಕು ಎಂದು ಇರುವು ದನ್ನು ಆಚರಣೆಗೆ ತಂದಿದ್ದೀರಾ?

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ:—ಅದನ್ನು ನಾನು ನೋಡುತ್ತೇನೆ, ಈಗ ಹೇಳಲಿಕ್ಕೆ ಬರುವುದಿಲ್ಲ.

Damage to Crops due to Hail Storm in Mulbagal Taluk in May 1978.

244 SRI J. M. REDDY (Mulbagal)—Will the Minister for Revenue be pleased to state:—

(a) the extent of loss of crops due to the hail storm, on 23rd May 1978 in the following villages of Mulubagal Taluk :

1. Nangali
2. Ambalikallu
3. Puttinahalli

4. Kappalmadugu
5. Mallinayakanahalli
6. Yachanahalli
7. Pulipapenahalli

(b) the extent of loss of crops;

(c) whether any relief has been provided by the Government to such riots;

(d) if not, the reasons therefor, and whether any steps are taken by the Government to provide relief?

SRI B. BASAVALINGAPPA (Minister for Revenue)—

(a) Rs. 81,641-00

(b) 61.35 acres.

(c) No.

(d) No application requesting relief has been received so far. The Deputy Commissioner has been instructed to provide relief as per rules.

ಶ್ರೀ ಜೆ. ಎಂ. ರೆಡ್ಡಿ :—ಉತ್ತರದಲ್ಲಿ ೬೧.೩೫ ಎಕರೆಗಳು ಎಂದು ಕೊಟ್ಟಿದ್ದಾರೆ. ಸಂಬಂಧಪಟ ಅಧಿಕಾರಿಗಳು ಸುಳ್ಳು ಮಾಹಿತಿ ಕೊಟ್ಟಿದ್ದಾರೆ ಎಂದು ನಾನು ಹೇಳುತ್ತೇನೆ. ಏಕೆಂದರೆ, ನಾನು, ತಹಶೀ ಲ್ದಾರ್, ಅಧಿಕಾರಿಗಳು ಎಲ್ಲಾ ಹೋಗಿ ಪರಿಶೀಲನೆ ಮಾಡಿದ್ದೇವೆ. ಸುಮಾರು ೨೦೦ ಎಕರೆಗೆ ಮೇಲ್ಪಟ್ಟು ಬೆಳೆ ನಷ್ಟವಾಗಿದೆ. ಇಲ್ಲಿ ಕೊಟ್ಟಿರುವುದು ಸುಳ್ಳು ಮಾಹಿತಿ ಎಂದು ಹೇಳುತ್ತೇನೆ. ಜೊತೆಗೆ ಸಂಬಂಧ ಪಟ್ಟ ರೈತರಿಂದ ಸಹಾಯಧನ ಕೋರಿ ಯಾವ ಅರ್ಜಿಯೂ ಬಂದಿಲ್ಲ ಎಂದು ಹೇಳಿದ್ದೀರಿ. ನಾನೇ ಖುದ್ದಾಗಿ ತಹಶೀಲ್ದಾರರಿಗೆ ಮತ್ತು ಜಿಲ್ಲಾಧಿಕಾರಿಗಳಿಗೆ ರೈತರಿಂದ ಅರ್ಜಿಗಳನ್ನು ಕೊಡಿಸಿದ್ದೇನೆ. ಇದು ವರೆಗೂ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ ಇನ್ನು ಮುಂದಾದರೂ ಸಹಾಯಧನ ಕೊಡಲು ಸಿದ್ಧ ರಾಗಿದ್ದೀರಾ ?

† ಶ್ರೀ ಬಿ. ಬಸವಲಿಂಗಪ್ಪ .—ಒಂದನೆಯದಾಗಿ, ನಾವು ಕೊಟ್ಟಿರತಕ್ಕ ಅಂಕಿಅಂಶ ಸರಿಯಲ್ಲ, ೨೦೦ ಎಕರೆಯಲ್ಲಿ ಕಷ್ಟವಾಯಿತು ಎಂದು ಹೇಳಿದ್ದೀರಿ. ಇದಕ್ಕೆ ನಮ್ಮ ಹತ್ತಿರ ವರದಿ ಇಲ್ಲ. ಎರಡ ನೆಯದಾಗಿ, ಪರಿಹಾರ ಕೊಡಲು ತಯಾರಾಗಿದ್ದೀರಾ ಎಂದು ಕೇಳಿದ್ದೀರಿ, ಅವರು ನಮಗೆ ಪರಿಹಾರ ಕೊಡಿ ಎಂದು ಕೇಳಿದರೆ ಆಗ ನಾವು ಆ ಕೆಲಸ ಮಾಡಬೇಕಾಗಿರುವುದು. ಅವರು ಇದುವರೆಗೆ ಕೇಳಿಲ್ಲ ನಾವು ಮಾಡುವುದಕ್ಕೆ. ಇನ್ನು ಮಾನ್ಯ ಸದಸ್ಯರು ನಾನೇ ಅರ್ಜಿಗಳನ್ನು ಕೊಡಿಸಿದ್ದೇನೆ ಎಂದು ಹೇಳಿ ದ್ದಾರೆ. ನನಗೆ ಬಂದಿರತಕ್ಕ ವರದಿ ಪ್ರಕಾರ ಯಾರೂ ಕೊಟ್ಟಿಲ್ಲ ಎಂದು ಹೇಳಿದ್ದಾರೆ. ಇದು ಆಗಿ ಬಹಳ ದಿವಸ ಆಗಿದೆ. ಇವತ್ತು ಎಷ್ಟು ನಷ್ಟವಾಗಿದೆ ಎಷ್ಟು ನಷ್ಟವಾಗಿಲ್ಲ ಎನ್ನುವುದನ್ನು ಪುನರ್ಪರಿಶೀಲನೆ ಮಾಡತಕ್ಕ ಪ್ರಶ್ನೆ ನಮ್ಮ ಮುಂದೆ ಇರುವುದಿಲ್ಲ. ನಷ್ಟ ಎಷ್ಟಾಗಿದೆ ಎನ್ನುವ ಬಗ್ಗೆ ಅರ್ಜಿಗಳು ಏನಾದರೂ ಬಂದರೆ ಆದನ್ನು ನ್ಯಾಯವಾದ ರೀತಿಯಲ್ಲಿ ಪರಿಶೀಲನೆ ಮಾಡುತ್ತೇವೆ.

ಶ್ರೀ ಜೆ. ಎಂ. ರೆಡ್ಡಿ :—ಈಗಾಗಲೇ ಅರ್ಜಿಗಳನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಕೊಡಿಸಿದ್ದೇನೆ. ಅವರು ಗಮನಿಸಿಲ್ಲ ಎಂದು ಕಾಣುತ್ತದೆ.

ಶ್ರೀ ಬಿ. ಬಸವಲಿಂಗಪ್ಪ :—ಅರ್ಜಿಗಳನ್ನು ಕೊಟ್ಟಿದ್ದರೆ ಪರಿಶೀಲನೆ ಮಾಡಿಸುತ್ತೇನೆ.